ದಿನಪತ್ರಿಕೆ ಗಾತ್ರದಲ್ಲಿ ಬೆಳೆಯುತ್ತ ತನ್ನನ್ನು ಆವರಿಸಿದಂತೆ. ಬಾಲಾಜಿಯ ಫೋಟೊದ ಕಣ್ಣು, ಕಿವಿ, ಇತ್ಯಾದಿಗಳಲ್ಲಿ ಜೀವದಿಂದಿರಲು ಹೊಡೆದಾಡಿ ನೆಗೆದು ಬಿದ್ದಂತೆ.

ಸರಸೂ ಸ್ವಲ್ಪ ಮೈ ಅಲುಗಾಡಿಸಿದ್ದು ಕಂಡು ನಾಗೇಂದ್ರ ಅವಳ ಕಡೆ ನೋಡಿದ್ದ. ಈಗಲೂ ಮಾತನಾಡಿಸುವ ಧೈರ್ಯವಾಗಲಿಲ್ಲ. ಏನೊಂದೂ ಹೊಳೆಯದೆ ತಾನು ಸುಮ್ಮನೆ ಮಾಡುವ ಆಲೋಚನೆಗಳೆಲ್ಲ ವ್ಯರ್ಥವೆಂದು ತಿಳಿದಿದ್ದರೂ ಅದನ್ನೇ ಮಾಡುತ್ತ ಕುಳಿತಿದ್ದು ಸರಸೂ ಬಾಯಿಂದ ಏನು ಬರುತ್ತದೆ, ಅವಳೇನು ಮಾಡುತ್ತಾಳೆ ಎಂದು ಕಾದಿದ್ದ. ಕಾಲೇಜಿಗೆ ಹೋಗಿರಲಿಲ್ಲ.

ಈಗ ಹಜಾರದ ತುಂಬೆಲ್ಲ ಹಬ್ಬಿದ ಬೆಳಕು. ಸರಸೂಳ ಮುಖ ಇನ್ನಷ್ಟು ಗಂಭೀರವಾಯಿತು. ನಾಗೇಂದ್ರ ಅವಳಿಗೆ ಏನೂ ಅರಿಯದ ಮಗುವಾಗಿದ್ದ. ಏನು ಹೇಳಲಿ, ಎಲ್ಲವೂ ಕಷ್ಟವೇ ಎಂದುಕೊಂಡಳವಳು.

ಕುಳಿತಲ್ಲೇ ಕುಳಿತು ಅವಳಿಗೆ ಇನ್ನಷ್ಟು ಮೈ ಭಾರವಾದಂತೆ ಅನಿಸಿತು. ಅವಳು ಎದ್ದು ವಾಷ್ ಬೇಸಿನ್ ಕಡೆ ಹೋದಳು. ನಾಗೇಂದ್ರನ ನೋಟ ಅವಳನ್ನು ಹಿಂಬಾಲಿಸಿತು. ಅಲ್ಲಿ ಎದುರಿಗಿದ್ದ ಕನ್ನಡಿಯಲ್ಲಿ ತನ್ನ ಮುಖ ಕಂಡು ಕಣ್ಮುಚ್ಚಿದಳು. ಹಾಗೆಯೇ ಮುಖ ತೊಳೆದುಕೊಂಡು ಕಣ್ಬಿಡಲು ಭಯ ಮುತ್ತಿತು. ಇನ್ನಷ್ಟು ನೀರೆರಚಿಕೊಂಡ ಮೇಲೆ ಕಣ್ಣು ಬಿಟ್ಟರೂ ಉಗುಳು ನುಂಗಿದಳು. ಅಲ್ಲಿಂದ ಅತ್ತ ಬರುವಾಗ ನಾಗೇಂದ್ರ ತಂದಿಟ್ಟಿದ್ದ ಅರೆ ತೆರೆದಿದ್ದ ಬಾಲಾಜಿಯ ಸೂಟ್‌ಕೇಸ್ ಅವಳ ಕಾಲಿಗೆ ಬಡಿದು ಪೂರ್ತಿ ತೆರೆದುಕೊಂಡಿತು. ಅದರೊಳಗಿದ್ದದ್ದನ್ನು ಕಂಡು ಹಾಗೆಯೇ ಗೋಡೆಗೆ ಒರಗಿ ಕತ್ತೆತ್ತಿದಳು ಸರಸೂ. ಅದರಲ್ಲಿ ಇದ್ದದ್ದು ಹುಡುಗಿಯರ ಬ್ರಾಗಳು ಮತ್ತು ಪ್ಯಾಂಟಿಗಳು. ನಾಗೇಂದ್ರ, ಅವಳ ಕಡೆ, ವಸ್ತುಗಳ ಕಡೆ ನೋಡಿದ. ಬೆನ್ನು ಜಾರಿ ಬೀಳುತ್ತಿದ್ದ ಸರಸೂಳನ್ನು ಹಿಡಿದು ಕೂಡಿಸಿದ. ಅವಳ ಸ್ಥಿತಿ ಅವನಿಗೆ ದಿಕ್ಕು ತೋಚದಂತೆ ಮಾಡಿತು. ಅಕ್ಕಪಕ್ಕದವರನ್ನು ಕರೆಯುವುದೇ ಹೇಗೆ ತಿಳಿಯಲಿಲ್ಲ. ತಕ್ಷಣವೇ ಎದ್ದು ಲೋಟದ ತುಂಬ ನೀರು ತಂದು ಅವಳ ಅಂಗೈಯಲ್ಲಿಟ್ಟ. ಅದನ್ನವಳು ಹಿಡಿದುಕೊಂಡಿದ್ದರಿಂದ ಅವನಿಗೆ ಕೊಂಚ ಧೈರ್ಯ ಬಂತು. ನೀರಿನ ಲೋಟ ಹಿಡಿದಂತೆಯೇ ಅವಳ ಬಾಯಿಯ ಬಳಿ ತಂದ. ಎತ್ತಲೋ ನೋಡುತ್ತಿದ್ದ ಅವಳು ಲೋಟ ನೋಡುವಂತೆ ಮಾಡಿದ. ಅವಳು ನೀರು ಕುಡಿದಾಗ ಅವನಿಗೆ ಇನ್ನಷ್ಟು ಧೈರ್ಯ ಬಂತು.

ಒಂದಷ್ಟು ಸಮಯ ಕಳೆದಿರಬೇಕಷ್ಟೆ. 'ಏಳು ಹೋಗೋಣ' ಎಂದವಳು ಹೇಳಿದ್ದಕ್ಕೆ ಎಲ್ಲಿಂದ ಬಂತು ಇಷ್ಟು ಶಕ್ತಿ ಎಂದು ಅವಳ ಕಡೆ ನೋಡಿದ. ಅಳತೆ ಮೀರಿ ಬಿಗಿಯಾಗಿರುವಂತೆ ಕಂಡಿತು. ಅವಳ ಯೋಚನೆ ಅವನಿಗೆ ಎಟುಕಲಿಲ್ಲ.

'ಮೈಸೂರ್‌ಪಾಕ್ ಪೊಟ್ಟಣ ಎಲ್ಲಿದೆ?'

ನಾಗೇಂದ್ರ ತೆಗೆದುಕೊಂಡು ಬಂದ.

ಸೂಟ್‌ಕೇಸ್ ಕವರ್ ಪೂರ್ತಿ ತೆಗೆದು ಅದರಿಂದ ಹೊರಗೆ ಬಿದ್ದವುಗಳನ್ನೆಲ್ಲ ಒಳಗೆ ತಳ್ಳಿ ಕವರ್ ಚಚ್ಚಿದಳು. ಹಿಡಿದುಕೊಂಡಿತು.

ಹೊರಗೆ ರಣರಣ ಬಿಸಿಲು. ಅವಳಿಗೆ ತಲೆಯ ಮೇಲೆ ಕಾದ ಕಲ್ಲಿದ್ದಲಿದ್ದ ಬಾಂಡಲಿ ಇಟ್ಟಂಥ ಕಾವು. ಮೈಯೆಲ್ಲ ಬೆಂಕಿಯುಡುಗೆ ತೊಟ್ಟ ಹಾಗೆ. ಆಗೊಮ್ಮೆ ಈಗೊಮ್ಮೆ ಹಾದು ಹೋಗುವ ವಾಹನಗಳು ಪಕ್ಕಕ್ಕಟ್ಟುವ ಗಾಳಿ ಕೆಂಡವೆರಚಿದ ಹಾಗೆ. ರಸ್ತೆಯಲ್ಲಿ ನರಪಿಳ್ಳೆಯಿಲ್ಲ. ಸರಸೂ ಸೂಟ್‌ಕೇಸ್ ಹಿಡಿದು, ನಾಗೇಂದ್ರ ಮೈಸೂರ್‌ಪಾಕ್ ಪೊಟ್ಟಣ ಹಿಡಿದು ಒಂದಷ್ಟು ಸಮಯ